

ತಲಕಾಡನ್ನು ಆವರಿಸಿರುವ ಮರಳ ರಾಶಿ



ದೇಗುಲದ ಕಲ್ಯಾಣಿ



ವೈದ್ಯನಾಥೇಶ್ವರ ದೇಗುಲ

ನೈಸರ್ಗಿಕ ತಾಣದಿಂದ. ತಿ. ನರಸೀಪುರದಲ್ಲಿ ಕಬಿನಿ ನದಿಯೊಂದಿಗೆ ಸಂಗಮಗೊಳ್ಳುವ ಕಾವೇರಿ ಮುಂದೆ ವಿಶಾಲವಾಗಿ ಹರಿಯುತ್ತಾಳೆ. ತಲಕಾಡು ಪಕ್ಕದಲ್ಲಿಯೇ ಎತ್ತ ನೋಡಿದರೂ ಮರಳ ರಾಶಿಯೇ ಕಣ್ಣಿಗೆ ರಾಚುತ್ತದೆ. ಮರಳ ನಡುವೆಯೇ ಕಾವೇರಿ ನಿರುಮ್ಮಳವಾಗಿ ಹರಿಯುವಾಗ ಒಡಲಲ್ಲಿ ಜನ ಆಟವಾಡುತ್ತಲೇ ಸಂತಸಪಡುತ್ತಾರೆ. ಬೇಸಿಗೆ ವೇಳೆ ನೀರಿನ ಹರಿವು ಕಡಿಮೆ ಇರುವುದರಿಂದ ಜನ ಒಳಕ್ಕೂ ಹೊಕ್ಕು ಖುಷಿಯಿಂದ ಆಟವಾಡಬಹುದು. ಮಕ್ಕಳು, ಹಿರಿಯರು ಸಹಿತ ಎಲ್ಲ ವಯೋಮಾನದವರಿಗೂ ಇದು ಖುಷಿ ಕೊಡುತ್ತದೆ. ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು ಮಾತ್ರವಲ್ಲದೇ ಬೇರೆ ಬೇರೆ ಕಡೆಯಿಂದಲೂ ಪ್ರವಾಸಿಗರು ಇಲ್ಲಿಗೆ ಬಂದು ಇಲ್ಲಿನ ಆಹ್ಲಾದಕರ ವಾತಾವರಣದಲ್ಲಿ ಸಂತಸಗೊಂಡು ಹೋಗುತ್ತಾರೆ.

ಕಾವೇರಿ ನದಿಯಲ್ಲಿ ಆಟವಾಡುತ್ತಲೇ ಮತ್ತೊಂದು ತುದಿಗೆ ಹೋಗಿ ಬರಲು ತೆಪ್ಪಗಳ ಸೇವೆಯೂ ಇದೆ. ಎಂಟತ್ತು ಮಂದಿ ಒಂದು ತೆಪ್ಪದಲ್ಲಿ ಕುಳಿತು ರಭಸವಾಗಿ ಹರಿಯುವ ನದಿ ನೀರನ್ನು ದಾಟುವುದು, ಅಂಬಿಗ ತೆಪ್ಪವನ್ನು ತಿರುಗಿಸಿ ನೀಡುವ ಮುದ ಮೈಮನ ಪುಳಕಿತಗೊಳಿಸುತ್ತದೆ.

ನದಿ ತೀರದಲ್ಲಿಯೇ ಕಾಡಿನ ವಾತಾವರಣವೂ ಇದೆ. ಹಚ್ಚ ಹಸುರಿನ ಮರಗಳು ಮರಳ ರಾಶಿಗೆ ಪೂರಕವಾಗಿ ಆಕರ್ಷಿಸುತ್ತವೆ. ಕರ್ನಾಟಕ ಅರಣ್ಯ ಇಲಾಖೆಯೂ ಪ್ರವಾಸಿಗರಿಗೆ ತಕ್ಕ ಮಟ್ಟಿಗಿನ ಸೌಲಭ್ಯಗಳನ್ನು ಒದಗಿಸಿದೆ. ಅಲ್ಲಿಯೇ ಊಟಕ್ಕೂ ವ್ಯವಸ್ಥೆಯಿದೆ. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ಇಲ್ಲವೇ ಮಧ್ಯಾಹ್ನದ ನಂತರ ಇಳಿ ಸಂಜೆಯವರೆಗೂ ಇಲ್ಲಿ ಕಳೆಯಬಹುದು. ಸಮೀಪದಲ್ಲಿಯೇ ಬೆಟ್ಟದ ಮೇಲೆ ನಿಂತಿರುವ ಮುಡುಕತೊರೆ ಮಲ್ಲಿಕಾರ್ಜುನಸ್ವಾಮಿಯ ದರ್ಶನವನ್ನೂ ಮಾಡಬಹುದು. ಅಲ್ಲಿಂದ ನಿಂತು ನೋಡುವಾಗ ಕಾವೇರಿ ನದಿ ಎರಡು ಹೋಳಾಗಿ ಒಡೆದು ಕೂಡುವ ಚಿತ್ರಣ ಮೋಹಕವಾಗಿದೆ.

ಮೈಸೂರಿನಿಂದ 45 ಕಿ.ಮೀ. ದೂರದಲ್ಲಿರುವ ತಲಕಾಡಿಗೆ ತಿ. ನರಸೀಪುರ, ಕೊಳ್ಳೇಗಾಲ ಇಲ್ಲವೇ ಮಳವಳ್ಳಿ ಮಾರ್ಗವಾಗಿ ಬರಬಹುದು. ಬಸ್ ವ್ಯವಸ್ಥೆ ಚೆನ್ನಾಗಿದೆ. ಸ್ವಂತ ವಾಹನದಲ್ಲಿ ಬಂದವರು ಸುತ್ತಮುತ್ತಲಿನ ತಾಣಗಳಿಗೂ ಹೋಗಬಹುದು. ಈ ಬೇಸಿಗೆ ತಲಕಾಡಿನ ಧಾರ್ಮಿಕ ಕ್ಷೇತ್ರಗಳ ಜತೆಗೆ ಇತಿಹಾಸದ ಹಾದಿ, ಕಾವೇರಿ ನದಿ ತೀರದ ಮರಳು ರಾಶಿಯ ಖುಷಿ ನೀಡಲಿ. ■

